4 ಎಚ್. ಲಕ್ಷ್ಮೀನಾರಾಯಣಸ್ವಾಮಿ ಅವರ ಎರಡು ದೀರ್ಘಕಾವ್ಯಗಳು ನಮ್ಮ ಮುಂದಿವೆ, ಪುರಾಣದ ಕಾವ್ಯಗಳನ್ನು ದಟ್ಟ ರೂಪಕಗಳ ಮೂಲಕ ಜಾಗತಿಕ ಚರ್ಚೆ ನಡೆಸಿದ್ದಾರೆ; ಆದರೆ ಅವು 'ಎಡಬಲ'ಗಳ ವ್ಯಾಜ್ಯದಿಂದ ಮೂಲೆ ಸೇರಿರುವುದು ದುರದೃಷ್ಟಕರ.

5 ಹಳೆ ಕೆರೆಗೆ ಹೊಸ ನೀರು ಹರಿದುಬಂದಂತೆ ಬದಲಾವಣೆಗಳೇನೋ ನಡೆದಿವೆ, ಹಾಗಾಗಿ ಮೂಲ ಪರಿಕಲ್ಪನೆಗೂ ಈಗಿನದಕ್ಕೂ ಸಂಬಂಧವಿಲ್ಲವೆಂದು ಅಲ್ಲಗಳೆದರೂ ಹೃದಯ ಮಾತ್ರ ಒಂದೇ ಆಗಿದೆ.

6 ಮನೆಗಳಲ್ಲಿ ಮತ್ತು ಶಾಲಾ ಕಾಲೇಜು ಮಟ್ಟದಲ್ಲೇ ಇವು ನಿರ್ಧಾರಗೊಳ್ಳುತ್ತಿವೆ. ಇವೊತ್ತಿಗೂ ಗ್ರಾಮಾಂತರ ಪ್ರದೇಶಗಳಲ್ಲಿರಲಿ, ನಗರದ ತುದಿಗಳ ಊರುಗಳಲ್ಲಿ ದಲಿತರು ತಮ್ಮ ಹೆಣ್ಣುಮಕ್ಕಳಿಗೆ ಓಂ ಶಕ್ತಿ ಮಾಲೆ ತೊಡಿಸುತ್ತಾರೆ. ಬಾಬಾ ಸಾಹೇಬರನ್ನು ತಮ್ಮ ಮಕ್ಕಳಿಗೆ ಪರಿಚಯಿಸುವುದಕ್ಕೆ ಹಿಂಜರಿಯುವ ಪೋಷಕರು ಮತ್ತು ಶಿಕ್ಷಕರಿರುವುದನ್ನು ನೋಡುತ್ತಿದ್ದೇವೆ. ಎಂಜಿನಿಯರಿಂಗ್ ಓದುವ ದಲಿತ ಹುಡುಗಿಯೊಬ್ಬಳು ಸಂವಿಧಾನ ಬದಲಿಸಿದರೆ ಒಳ್ಳೆಯದೆಂದು ಮಾತನಾಡುತ್ತಾಳೆ.

7 ದಲಿತ ಲೋಕದ ಕುರಿತು ಎಗ್ಗಿಲ್ಲದೇ ಬರೆಯಲೇಬೇಕಾದ ಅನಿವಾರ್ಯತೆ ಇದೆ, ಎಂದೂ ಬರಿದಾಗದ ಕಣಜವಾದ್ದರಿಂದ. ಅಲ್ಲಿ ನೋವು, ಕ್ರೌರ್ಯ ಬೇರೆ ಬೇರೆ ರೂಪಗಳಲ್ಲಿ ತಲೆ ಎತ್ತುತ್ತಲೇ ಇವೆ. ಅದಕ್ಕೆ ದಿಟ್ಟ ಉದಾಹರಣೆ, ಊನಾದಲ್ಲಿ ದಲಿತ ಯುವಕರನ್ನು ಬೆತ್ತಲುಗೊಳಿಸಿ ಥಳಿಸಿದ್ದು, ಉತ್ತರ ಪ್ರದೇಶದಲ್ಲಿ ತರುಣನೊಬ್ಬ ಕುದುರೆ ಹೊಂದಿದ್ದನೆಂದು ಅವನನ್ನು ಹೊಡೆದು ಕೊಂದಿದ್ದು, ಇನ್ನೂ ಅನೇಕ ಘಟನೆಗಳು ನಡೆಯುತ್ತಲೇ ಇವೆ. ಆದರೆ ನಿರೂಪಿಸುವ ಭಾಷೆ ಬದಲಾಗಬೇಕು. ಗೆಳೆಯ ನಾರಾಯಣ ಕ್ಯಾಸಂಬಳ್ಳಿ ಹೇಳುವಂತೆ, 'ಅಣ್ಣಾ, ನಾವೂ ಕೂಡ ಪಬ್‌ನಲ್ಲಿ ಕುಳಿತು ಚರ್ಚೆ ನಡೆಸುವಂತಾಗಬೇಕು, ಅಂತರರಾಷ್ಟ್ರೀಯ ಬ್ರಾಂಡೆಡ್ ಉಡುಪುಗಳು ಮತ್ತು ಬೂಟುಗಳನ್ನು ಧರಿಸಬೇಕು. ಆಗ ನಮ್ಮ ಚಿಂತನೆ ಮತ್ತು ನಡೆ ಬದಲಾಗಬಹುದು.' ಬಾಬಾ ಸಾಹೇಬರು ಇದನ್ನೆಲ್ಲ ಅರವತ್ತು ಎಪ್ಪತ್ತು ವರ್ಷಗಳ ಹಿಂದೆಯೇ ನಡೆಸಿದ್ದರು, ಆದರೆ ನಾವು ಅವರನ್ನು ಕೊಳಚೆ ಪ್ರದೇಶಗಳಲ್ಲಿ ಇರಿಸುವ ಯಾನವನ್ನೇ ಕಾಲದಿಂದ ಕಾಲಕ್ಕೆ ಅನುಸರಿಸುತ್ತಾ ಬಂದಿದ್ದೇವೆ.

## ವಿ.ಎಂ. ಮಂಜುನಾಥ್

ಬೆಂಗಳೂರಿಗೆ 14 ಕಿಲೋಮೀಟರ್ ದೂರದಲ್ಲಿರುವ ವೆಂಕಟಾಲ ಗ್ರಾಮದವರು. ವೆಂಕಟಾಲ ಮತ್ತು ಯಲಹಂಕದಲ್ಲಿ ವಿದ್ಯಾಭ್ಯಾಸ. ಹೈಸ್ಕೂಲ್ ಓದುತ್ತಿರುವಾಗಲೇ ಲಂಕೇಶರ ಲಂಕೇಶ್ ಪತ್ರಿಕೆಯ ಪ್ರಭಾವ. ಅಭಿನಯ ತರಂಗ ಮತ್ತು ನೀನಾಸಮ್ ರಂಗಶಿಕ್ಷಣ ಕೇಂದ್ರದಲ್ಲಿ ಒಂದು ವರ್ಷದ ಡಿಪ್ಲೊಮೊ. ಸಾಹಿತ್ಯ ರಚನೆ: ಕವನ ಸಂಗ್ರಹಗಳು: 'ಫಾದರ್ 55 ಮತ್ತು ನೀನಾಸಮ್ ಡೈರಿಯ ಕವಿತೆಗಳು', 'ಲೆವೆಲ್‌ಕ್ರಾಸಿಂಗ್'. ಕಥಾಸಂಕಲನ: 'ಬ್ರಾಂಡಿ', ನಾಟಕ: 'ಕ್ರಿಮಿ'. ಕಾದಂಬರಿಗಳು: 'ರಾಯಲ್ ಎನ್‌ಫೀಲ್ಡ್', 'ಅಸ್ಪೃಶ್ಯ ಗುಲಾಬಿ', ' ಸಿಕೆ ಜೇಡನ ಆತ್ಮಚರಿತ್ರೆ'.